(ಸಾಕ್ಷಿಯನ್ನು ದಿಃ 09-11-2018 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.)

**_ಪಾಟೀ ಸವಾಲು ಃ ಪ್ರತಿವಾದಿ ಪರ ಃ ಶ್ರೀ ಜಿ ಎಫ್ ಎನ್ ವಕೀಲರಿಂದ_**

ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟ ನಿ.ಪಿ.8 - ಕ್ರಯದ ಕರಾರು ಪತ್ರವನ್ನು ನಾನು ಸುಳ್ಳು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಚಿತ್ತಾಕುಲ ಗ್ರಾಮದಲ್ಲಿ ಬರುತ್ತದೆ. ನನ್ನ ದಾವಾ ಶೆಡ್ಯೂಲ್‌ನಲ್ಲಿ ಸದ್ರಿ ದಾವಾ ಸ್ವತ್ತು ಮಾಜಾಳಿ ಗ್ರಾಮದಲ್ಲಿ ಇದೆ ಎಂಬುದಾಗಿ ಬರೆದಿರುವುದು ತಪ್ಪು ಎಂದರೆ ಸರಿಯಲ್ಲ. ಯಾವಾಗಲೂ ಸಹ ಪ್ರತಿವಾದಿಯು ನನ್ನ ಹೆಸರಿಗೆ ದಾವಾ ಸ್ವತ್ತಿನ ಬಾಬ್ತು ಕ್ರಯದ ಕರಾರು ಪತ್ರ ಬರೆದುಕೊಟ್ಟಿರುವುದಿಲ್ಲ ಮತ್ತು ದಾವಾ ಸ್ವತ್ತನ್ನು ಮಾರಾಟ ಮಾಡುವ ಉದ್ದೇಶ ಕೂಡ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಏಪ್ರೀಲ್ 2012 ನೇ ಇಸ್ವಿಯಲ್ಲಿ ಸದ್ರಿ ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿದ್ದೇವೆ. ಕ್ರಯದ ಕರಾರು ಪತ್ರದ ದಿನಾಂಕದಿಂದ 6 ತಿಂಗಳ ಒಳಗಾಗಿ ಕ್ರಯಪತ್ರವನ್ನು ಬರೆದುಕೊಡಬೇಕು ಎಂಬುದಾಗಿ ಶರತ್ತನ್ನು ವಿಧಿಸಲಾಗಿತ್ತು. ಅಕ್ಟೋಬರ್ 2012 ರವರೆಗೆ ಸದ್ರಿ ಅವಧಿಯು ಚಾಲ್ತಿಯಲ್ಲಿತ್ತು. ದಾವಾ ದಾಖಲು ಮಾಡುವ ಪೂರ್ವದಲ್ಲಿ ನನ್ನ ಹೆಸರಿಗೆ ದಾವಾ ಸ್ವತ್ತಿನ ಬಾಬ್ತುಕ್ರಯ ದಸ್ತಾವೇಜು ಬರೆದುಕೊಡಬೇಕು ಎಂಬುದಾಗಿ ಪ್ರತಿವಾದಿಗೆ ನಾನು ಯಾವುದೇ ಲೀಗಲ್ ನೋಟಿಸು ಕೊಟ್ಟಿಲ್ಲ. ದಿಃ 05-09-2013 ರಂದು ನಾನು ಪ್ರತಿವಾದಿಗೆ ನಮ್ಮ ವಕೀಲರ ಮೂಲಕ ನೋಟಿಸು ಕೊಡಿಸಿದ್ದೆನು ಎಂದರೆ ಸರಿ. ಅದೇ ರೀತಿ ಸದ್ರಿ ನೋಟಿಸಿಗೆ ಪ್ರತಿವಾದಿ ಪರ ವಕೀಲರು ಜವಾಬು ನೋಟಿಸು ಕೊಟ್ಟಿದ್ದಾರೆ ಎಂದರೆ ಸರಿ. ಸದ್ರಿ ಕರಾರು ಪತ್ರದ ಪ್ರಕಾರ 6 ತಿಂಗಳ ಅವಧಿಯೊಳಗೆ ಕ್ರಯ ದಸ್ತಾವೇಜು ಬರೆದುಕೊಡದೇ ಇದ್ದುದರಿಂದ ನಾನು ಆ ಬಗ್ಗೆ ನೋಟಿಸು ಕೊಡಿಸಬೇಕಾಗಿತ್ತು ಎಂದರೆ ಸರಿ.

ಕ್ರಯದ ಪ್ರತಿಫಲದ ಬಾಬ್ತು ರೂ.3,00,000-00 ಗಳನ್ನು ಮುಂಗಡವಾಗಿ ನಗದು ರೂಪದ ಬದಲಾಗಿ ಚೆಕ್ ಅಥವಾ ಡಿಮಾಂಡ್ ಡ್ರಾಫ್ಟ ಮೂಲಕ ಸಂದಾಯ ಮಾಡಬಹುದಾಗಿತ್ತು ಎಂದರೆ ಸರಿ. ಆ ರೀತಿ ನಾನು ಸದ್ರಿ ಹಣವನ್ನು ಮುಂಗಡ ರೂಪದಲ್ಲಿ ಪಾವತಿ ಮಾಡದೇ ನಿ.ಪಿ.8 – ಕ್ರಯದ ಕರಾರು ಪತ್ರವನ್ನು ಸುಳ್ಳು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**(ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.)**

(ತೆರೆದ ನ್ಯಾ.ದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಕಾರವಾರ.